# ಜನ-ಪದ

## ಕನ್ನಡ ಚಂದ್ರ

'ಬಾರಿಸು ಕನ್ನಡ ಡಿಂಡಿಮವ' – ಕುವೆಂಪು ವಿರಚಿತ ಜನಪ್ರಿಯ ಕವಿತೆ. 'ಕನ್ನಡ ಡಿಂಡಿಮ' ನುಡಿಸುವ ಮೂಲಕ 'ಸತ್ತಂತಿಹರನು ಬಡಿದೆಚ್ಚರಿಸು' ಎನ್ನುವುದು ಹೃದಯಶಿವನಿಗೆ ಕವಿ ನೀಡಿರುವ ಕರೆ. ಆ ಕರೆಯನ್ನು ಬದುಕಿನುದ್ದಕ್ಕೂ ಪ್ರಜ್ಞಾಪೂರ್ವಕವಾಗಿ ಪಾಲಿಸುತ್ತಾ ಬಂದವರು ರಾ.ನಂ. ಚಂದ್ರಶೇಖರ್.

'ಕನ್ನಡ ಡಿಂಡಿಮ' ರಾ.ನಂ. ಚಂದ್ರಶೇಖರ ಅವರ ಕೃತಿಯ ಹೆಸರು. ಕನ್ನಡ ಚಳವಳಿಗಳ ಇತಿಹಾಸವನ್ನು ದಾಖಲಿಸಿರುವ ಕೃತಿಯ ಶೀರ್ಷಿಕೆ, ರಾ.ನಂ. ಅವರ ಬದುಕನ್ನು ಸೂಚಿಸುವಂತಹದ್ದೂ ಹೌದು. ಅವರು ನಡೆದಾಡುವ 'ಕನ್ನಡ ಡಿಂಡಿಮ.' ಸಾರ್ವಜನಿಕ ಬದುಕಿನಲ್ಲಿ ಕನ್ನಡ ಪ್ರಜ್ಞೆ ಜೀವಂತವಾಗಿ ಇರಿಸಲು ಶ್ರಮಿಸುತ್ತಿರುವ ಡಿಂಡಿಮ.



ಕನ್ನಡ ಚಳವಳಿಗಳ ಇತಿಹಾಸದ ಕೃತಿಗಳು ಕನ್ನಡಕ್ಕೆ ಹೊಸತಲ್ಲ. ರಾ.ನಂ. ಅವರ ಕೃತಿಯ ವಿಶೇಷ ಇರುವುದು ಚಳವಳಿಯ ಭಾಗವಾಗಿದ್ದುಕೊಂಡೂ ಒಂದು ಅಂತರದಲ್ಲಿ ನಿಂತು ನೋಡಿರುವ ಕ್ರಮದಲ್ಲಿ. ಚಳವಳಿಯ ಭಾಗವಾಗಿದ್ದುಕೊಂಡೂ, 'ನಾನು' ಎನ್ನುವ ಆತ್ಮಪ್ರತ್ಯಯದಿಂದ ದೂರವುಳಿದು ಕನ್ನಡ ಚಳವಳಿಗಳ ಇತಿಹಾಸ ಕಟ್ಟುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಬೆಂಗಳೂರು ಕೇಂದ್ರಿತ ಚಳವಳಿಯ ಜೊತೆಗೆ, ನಾಡಿನ ವಿವಿಧ ಭಾಗಗಳಲ್ಲಿ ಜರುಗಿದ ಕನ್ನಡ ಚಳವಳಿಗಳ ಹೆಜ್ಜೆಗುರುತುಗಳನ್ನೂ ದಾಖಲಿಸಿರುವುದು 'ಕನ್ನಡ ಡಿಂಡಿಮ'ದ ವಿಶೇಷಗಳಲ್ಲೊಂದು.

ರಾ.ನಂ. ಅವರಿಗೀಗ ಎಪ್ಪತ್ತರ ಸಂಭ್ರಮ. ಎಪ್ಪತ್ತಾದರೂ ಕನ್ನಡ ಚಳವಳಿಯಿಂದ ಅವರು ನಿವೃತ್ತರಾಗಿಲ್ಲ. ಕಾರ್ಖಾನೆಗಳ ಕನ್ನಡ ಸಂಘ, ಕನ್ನಡಪರ ಸಂಘಸಂಸ್ಥೆಗಳ ಚಟುವಟಿಕೆಗಳಿಂದು ಈಗಲೂ ಬಿಡುವಿಲ್ಲದೆ ಓಡಾಡುತ್ತಿದ್ದಾರೆ. ಈ 'ಕನ್ನಡ ಚಂದ್ರ' ನೂರು ಮಳೆಗಾಲಗಳನ್ನು ಕಾಣುವಂತಾಗಲಿ.



## ನಾದದ ನವನೀತ

**68**ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳ ಪಟ್ಟಿಯಲ್ಲಿ ಚಿನ್ನದಗೆರೆಯಂತೆ ಕಾಣಿಸುವ ಕನ್ನಡದ ಹೆಸರು ಗಿರೀಶ ಕಾಸರವಳ್ಳಿ. ಅವರ ಪರಿಕಲ್ಪನೆ–ನಿರ್ದೇಶನದ 'ನಾದದ ನವನೀತ' ಡಾಕ್ಯುಮೆಂಟರಿ ಫಿಲ್ಮ್ ವಿಭಾಗದಲ್ಲಿ ಪುರಸ್ಕಾರಕ್ಕೆ ಪಾತ್ರವಾಗಿದೆ.

ಚಿತ್ರರಂಗದ ಹೊಸ ಪೀಳಿಗೆಯ ಕೆಲವು ನಿರ್ಮಾತೃಗಳು ಕನ್ನಡ ಸಿನಿಮಾಗಳನ್ನು ರಾಷ್ಟ್ರಮಟ್ಟದಲ್ಲಿ ವ್ಯಾಪಾರಿ ನೆಲೆಗಟ್ಟಿನಲ್ಲಿ ಗೆಲ್ಲಿಸುತ್ತಿರುವ ಮೂಲಕ, ಕನ್ನಡ ಚಿತ್ರರಂಗ ದೇಶದ ಗಮನಸೆಳೆದಿದೆ. ಆದರೆ, ರಾಷ್ಟ್ರಪ್ರಶಸ್ತಿಗಳಿಗೆ ಸಂಬಂಧಿಸಿದಂತೆ ಸ್ವರ್ಣಕಮಲದ ಕೊಯಿಲಿಗೆ ಮತ್ತೆ ಮತ್ತೆ ಗಿರೀಶರತ್ತಲೇ ನೋಡುವುದು ಅನಿವಾರ್ಯವಾಗಿದೆ. ನಾಲ್ಕು ಬಾರಿ ಸ್ವರ್ಣಕಮಲ ಪುರಸ್ಕಾರ ಪಡೆದಿರುವ ಅವರು, ಇತ್ತೀಚಿನ ವರ್ಷಗಳಲ್ಲಿ ಸಿನಿಮಾ ನಿರ್ದೇಶನಕ್ಕಿಂತಲೂ ಡಾಕ್ಯುಮೆಂಟರಿ ಫಿಲ್ಮ್‌ಗಳನ್ನು ರೂಪಿಸುವುದರಲ್ಲಿ ಹೆಚ್ಚಿನ ಒಲವು ವ್ಯಕ್ತಪಡಿಸುತ್ತಿರುವಂತೆ ಕಾಣಿಸುತ್ತಿದೆ. ಸಿನಿಮಾಗಳಲ್ಲಿ ಸಾಧಿಸಿದ ಯಶಸ್ಸನ್ನೇ ಡಾಕ್ಯುಮೆಂಟರಿ ಫಿಲ್ಮ್ ರೂಪಿಸುವುದರಲ್ಲೂ ಅವರು ಗಳಿಸುತ್ತಿರುವುದು ಕುತೂಹಲಕರ.

ಪಂಡಿತ್ ವೆಂಕಟೇಶ ಕುಮಾರ್ ಅವರ ಬದುಕು– ಸಂಗೀತ ಸಿದ್ಧಿಯ ಕುರಿತ 'ನಾದದ ನವನೀತ' ಗಿರೀಶರ ನಿರ್ದೇಶನದ ಮೂರನೇ ಡಾಕ್ಯುಮೆಂಟರಿ ಫಿಲ್ಮ್. ಇದಕ್ಕೆ ಮೊದಲು, ಯು.ಆರ್. ಅನಂತಮೂರ್ತಿ ಹಾಗೂ ಅಡೂರು ಗೋಪಾಲಕೃಷ್ಣನ್ ಅವರ ಕುರಿತು ಗಿರೀಶರು ರೂಪಿಸಿದ್ದ ಸಾಕ್ಷ್ಯಚಿತ್ರಗಳು ಸಹೃದಯರ ಗಮನಸೆಳೆದಿದ್ದವು. ಈಗ 'ನಾದದ ನವನೀತ'ದ ಸರದಿ. ರಾಷ್ಟ್ರಪ್ರಶಸ್ತಿಯ ನವನೀತದ ಸಂಭ್ರಮ ಗಿರೀಶರನ್ನು ಮತ್ತೆ ಸಿನಿಮಾ ನಿರ್ದೇಶನಕ್ಕೆ ಕರೆದೊಯ್ಯಲಿ. ಆ ಮೂಲಕ ಕನ್ನಡಕ್ಕೆ, ಭಾರತೀಯ ಚಿತ್ರರಂಗಕ್ಕೆ ಮತ್ತೊಂದು ಒಳ್ಳೆಯ ಸಿನಿಮಾ ದೊರೆಯಲಿ. ●